**ದಿನಾಂಕಃ 16.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ. ಬಿ.ಎಂ.ಎನ್. 1 ನೇ ಪ್ರತಿವಾದಿಯ ಪರ ವಕೀಲರಿಂದಃ-**

ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನಾನು ಜನಿಸಿ ಸುಮಾರು 50 ವರ್ಷಗಳಾಗಿರಬಹುದು. 1 ನೇ ವಾದಿಗೆ ಸುಮಾರು 75 ವರ್ಷಗಳಾಗಿರಬಹುದು. ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಪ್ರತಿವಾದಿ ವಯಸ್ಸಿನಲ್ಲಿ ನನ್ನಗಿಂತ ಹಿರಿಯ ವ್ಯಕ್ತಿ ಎಂದರೆ ಸರಿ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ತಂಗಿ ಎಂದರೆ ಸರಿ.

1 ನೇ ವಾದಿಯು ಮಂಚಯ್ಯರವರನ್ನು ಯಾವ ದಿನಾಂಕದಂದು ವಿವಾಹವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಬ್ಬರ ವಿವಾಹ ಹೆಮ್ಮಿಗೆ ಗ್ರಾಮದಲ್ಲಿ ಆಗಿದೆ. ಅವರ ವಿವಾಹವನ್ನು ನೋಡಿರುವವರು ಇದ್ದಾರೆ. ಅವರು ವಿವಾಹವಾಗಿರುವ ಮತ್ತು ಗಂಡ ಹೆಂಡತಿಯಾಗಿ ಸಂಸಾರ ಮಾಡಿರುವ ಸಂಬಂಧ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ಪ್ರತಿವಾದಿಯರ ತಾಯಿಯ ಹೆಸರು ಪುಟನಂಜಮ್ಮ ಆಗಿದೆ. ಅವರು ಮರಣ ಹೊಂದಿದ್ದಾರೆ ಎಂದರೆ ಸರಿ. ಅವರು 1 ನೇ ವಾದಿಗಿಂತ ವಯಸ್ಸಿನಲ್ಲಿ ಹಿರಿಯ ವ್ಯಕ್ತಿ ಎಂದರೆ ಸರಿ. ಹಾಗಾಗಿ, ಸದರಿ ಮಂಚಯ್ಯ ರವರು ಪ್ರತಿವಾದಿಯರ ತಾಯಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾರೆಂದು ನಾನು ಹೇಳಿರುವುದು

ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರ ತಾಯಿ ಸದರಿ ಮಂಚಯ್ಯರವರ ಕಾನೂನುಬದ್ಧ ಹೆಂಡತಿ ಎಂದರೆ ಸರಿಯಲ್ಲ.

ದಾವಾಸ್ತಿಗಳ ವರ್ಣನೆಯ ಬಗ್ಗೆ ನನಗೆ ಗೊತ್ತಿಲ್ಲ. ಅವುಗಳ ಖಾತೆ ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ನನ್ನ ಅಣ್ಣ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ.

ನಾನು ತಲಕಾಡು ಗ್ರಾಮದಲ್ಲಿ ಹೆಂಚಿನ ಮನೆಯಲ್ಲಿ ವಾಸವಾಗಿದ್ದೇನೆ. ನನಗೆ ಸೇರಿರುವ ಎರಡು ಮನೆಗಳು ಹೆಮ್ಮಿಗೆ ಗ್ರಾಮದಲ್ಲಿವೆ ಎಂದರೆ ಸರಿ. ಆ ಎರಡೂ ಮನೆಗಳು ನನ್ನ ತಾತ ಮರಿಮಂಚಯ್ಯರವರಿಗೆ ಸೇರಿರುತ್ತವೆ. ಅವರಿಗೆ ನನ್ನ ತಂದೆ ಮಂಚಯ್ಯ, ಮಾದಮ್ಮ ಮತ್ತು ಮಾದಯ್ಯ ಎನ್ನುವ ಮಕ್ಕಳು ಇದ್ದರು. ಆ ಎರಡೂ ಮನೆಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ.

ನಾನು ಕಳೆದ 50 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆ. 1 ನೇ ಪ್ರತಿವಾದಿಯು ಕೂಡ ಅಷ್ಟು ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ನಾನು ಬೇರೆ ಜಮೀನನ್ನು ಉಳುಮೆ ಮಾಡುತ್ತಿದ್ದು, ಆ ಜಮೀನುಗಳು ನನ್ನ ತಂದೆಯಿಂದ ಬಂದಿವೆ. ಆ ಉಳುಮೆಯಿಂದ ಬಂದ ಉತ್ಪತ್ತಿಯನ್ನು ನಾನು ಬಳಸುತ್ತಿದ್ದೇನೆ.

1 ನೇ ಪ್ರತಿವಾದಿಯು ಕೂಡ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದು, ಆ ವ್ಯವಸಾಯದಿಂದ ಬಂದ ಉತ್ಪತ್ತಿಯನ್ನು ಆತನೆ ಬಳಸುತ್ತಿದ್ದಾನೆ, ಆತನೆ ಎಲ್ಲಾ ಜಮೀನುಗಳ ಉತ್ಪತ್ತಿಯನ್ನು ಬಳಸುತ್ತಿದ್ದಾನೆ.

ನಾನು 2 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ, ಸಹಿ ಮಾತ್ರ ಮಾಡುತ್ತೇನೆ.

ದಾವಾಸ್ತಿಗಳಲ್ಲಿ ಕೆಲವು ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯವಾಗಿದ್ದು, ಕ್ರಯಪತ್ರಗಳನ್ನು ನಾನು ನೋಡಿಲ್ಲ.

ಈ ಪ್ರಕರಣಕ್ಕೆ ಮಾಹಿತಿಯನ್ನು ನನ್ನ ತಾಯಿ ನಮ್ಮ ವಕೀಲರಿಗೆ ನೀಡಿರುತ್ತಾರೆ. ನನ್ನ ತಾಯಿಗೆ ಸರಿಯಾಗಿ ಓಡಾಡಲು ಆಗುವುದಿಲ್ಲ.

ನನ್ನ ತಾಯಿ ಸದರಿ ಮಂಚಯ್ಯರವರ 1 ನೇ ಹೆಂಡತಿ ಆಗಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ದಿನಾಂಕ 05.06.1969 ರಂದು ಮತ್ತು 2 ನೇ ಪ್ರತಿವಾದಿ ದಿನಾಂಕ 16.07.1974 ರಂದು ಜನಿಸಿದ್ದಾರೆ ನನಗೆ ಗೊತ್ತಿಲ್ಲ. ಅವರು ಕ್ರಮವಾಗಿ ಎಸ್.ಎಸ್.ಎಲ್.ಸಿ. ಮತ್ತು 6 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ ಎಂದರೆ ಸರಿ. ಅವರ ಶಾಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಕೆ. ಮಂಚಯ್ಯ ಎಂದು ನಮೂದು ಇದೆ ಎಂದರೆ ಸರಿ.

ಪ್ರತಿವಾದಿಯರ ತಂದೆ ಕೆ. ಮಂಚಯ್ಯ ಸುಮಾರು 5 ವರ್ಷಗಳ ಹಿಂದ ಮತ್ತು ತಾಯಿ ಪುಟ್ಟನಂಜಮ್ಮರವರು ಸುಮಾರು ಎಂಟು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದರೆ ಸರಿ.

ಪ್ರತಿವಾದಿಯರ ವಯಸ್ಸನ್ನು ನನ್ನ ವಾದ ಪತ್ರದಲ್ಲಿ ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**